L.T.T.E., threat was there. The traffic on the dam is increasing day by day K.E.B. Officials were to disconnect the power supply for non-payment of Electricity charges. We should preserve and improve the dam in view of the irrigation and Tourism importance. The Government gets plenty of income by the gate collections. The notified area is not financially viable to take even the water supply. I request the Hon'ble Minister to constitute Krishnarajasagar Development Authority for the total development of the area.

ಶ್ರಿ ಎಂ.ವೀರಪ್ಪ ಮೊಯಿಲಿ: (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನೀರಾವರಿ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತಿದ್ದೇನೆ.

ಜುಲೈ 1991 ರಲ್ಲಿ ಉಂಟಾದ ಪ್ರವಾಹದ ಹಾವಳಿ ಮತ್ತು ಕೃಷ್ಣರಾಜಸಾಗರ ಅಣೆಕಟ್ಟಿಗೆ ಎಲ್.ಟಿ.ಟಿ.ಇ. ಉಗ್ರಗಾಮಿಗಳಿಂದ ಬಂದ ಬೆದರಿಕೆ ಇವೆರಡೂ ವಿಚಾರಗಳ ಹಿನ್ನೆಲೆಯಲ್ಲಿ ಕೃಷ್ಣರಾಜ ಸಾಗರ ಮತ್ತು ಬೃಂದಾವನ ತೋಟ ಇವುಗಳನ್ನು ಸಾರ್ವಜನಿಕರು ಪ್ರವೇಶಿಸದಂತೆ ನಿಷೇಧಿಸಿ ಆಜ್ಞೆ ಹೊರಡಿಸಲಾಗಿತ್ತು.

2 ಪ್ರವಾಹದ ಹಾವಳಿಯಿಂದ ಉಂಟಾದ ಹಾನಿಗೆ ದುರಸ್ತಿ ಕೆಲಸವನ್ನು ಕೈಗೊಂಡು ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. 26-1-1992ರಿಂದ ಬೃಂದಾವನ ತೋಟವನ್ನು ಸಾರ್ವಜನಿಕರ ಪ್ರವೇಶಕ್ಕೆ ತೆರವು ಮಾಡಲಾಗಿದೆ. ಕೃಷ್ಣರಾಜಸಾಗರದ ಎರಡೂ ದಂಡೆಯ ಹಳ್ಳಿಗಳ ಜನರಿಗೆ ಮತ್ತು ಕಾರ್ಮಿಕರಿಗೆ ಅಣೆಕಟ್ಟಿನ ಮೇಲಿನ ರಸ್ತೆಯಲ್ಲಿ ಓಡಾಡಲು ನಿಯಮಿತ ವೇಳೆಗಳನ್ನು ಸೂಚಿಸಿ ಪೋಲೀಸ್ ವತಿಯಿಂದ ಪರವಾನಿಗಿ ಮತ್ತು ಗುರುತಿನ ಚೀಟಿ ನೀಡಲಾಗಿದೆ. ಇಂತಹ ಗುರುತಿನ ಚೀಟಿ ಹೊಂದಿರುವವರನ್ನು ಕುಲಂಕುಷವಾಗಿ ಗುರುತಿಸಿ ನಂತರ ಅವರನ್ನು ಅಣೆಕಟ್ಟಿನ ಮೇಲಿನ ರಸ್ತೆಯನ್ನು ಉಪಯೋಗಿಸಲು ಬಿಡಲಾಗುತ್ತಿದೆ.

3. ಕೃಷ್ಣರಾಜ ಸಾಗರಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ವಿದ್ಯುತ್ ಮಂಡಳಿಯಿಂದ ಬರುವ ಬಿಲ್ಲುಗಳನ್ನು ಅವುಗಳು ಸ್ವೀಕೃತವಾದ ಕೂಡಲೇ ಹಣವನ್ನು ಪಾವತಿ ಮಾಡಲಾಗುತ್ತಿದೆ. ಪಾವತಿ ಆಗದೆ ಇರುವ ಬಿಲ್ಲುಗಳು ಇದ್ದಲ್ಲಿ ಇವುಗಳಿಗೂ ಸಹ ಹಣ ಪಾವತಿ ಮಾಡುವ ಬಗ್ಗೆ ತುರ್ತು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ.

4. ಕೃಷ್ಣರಾಜಸಾಗರ, ಬೃಂದಾವನ ತೋಟ ಮತ್ತು ಇದರ ತೀವ್ರ ಸಮೀಪದ ಪ್ರದೇಶಗಳನ್ನು, "ರಕ್ಷಿತಾ ಪ್ರದೇಶ" ಎಂದು ಘೋಷಿಸಿ ಇದರ ಉಸ್ತುವಾರಿಕೆಯನ್ನು ನೋಡಿಕೊಳ್ಳಲು ನೀರಾವರಿ ಹಾಗೂ ಒಳಾಡಳಿತ ಇಲಾಖೆಗಳ ಉನ್ನತ ಅಧಿಕಾರಿಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ಮತ್ತು ಕೃಷ್ಣರಾಜಸಾಗರದ ಸುತ್ತ ಮುತ್ತಲಿನ ಇತರ ಪ್ರದೇಶಗಳನ್ನು ನೀರಾವರಿ ಹಾಗೂ ಪ್ರವಾಸೋದ್ಯಮ ವಿಚಾರಗಳಿಂದ ಅಭಿವೃದ್ಧಿಗೊಳಿಸಲು ಕೃಷ್ಣರಾಜಸಾಗರ ಅಭಿವೃದ್ಧಿ ಪ್ರಾಧಿಕಾರ ಇವುಗಳನ್ನು ಸೃಜಿಸಲು ಉದ್ದೇಶಿಸಲಾಗಿದೆ. ಈ ಬಗ್ಗೆ ಕ್ರಮವನ್ನು ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು.

4. ಆಲ್ಲೂರು - ಚಿಕ್ಕಮಗಳೂರು ಮುಖ್ಯ ರಸ್ತೆ ಬದಿಯಲ್ಲಿರುವ 'ಬಿ' ಕೆರೆಯ ಒತ್ತುವರಿ.

ಶ್ರಿಮತಿ ಮೋಟಮ್ಮ (ಮೂಡಿಗೆರೆ):-ಮಾನ್ಯ ಉಪಾಧ್ಯಕ್ಷರೇ, ಚಿಕ್ಕಮಗಳೂರು ತಾಲ್ಲೂಕು ಆಲ್ಲೂರು ಹೋಬಳಿ ಆಲ್ಲೂರು - ಚಿಕ್ಕಮಗಳೂರು ಮುಖ್ಯ ರಸ್ತೆ ಬದಿಯಲ್ಲಿರುವ 'ಬಿ' ಕೆರೆಯನ್ನು ಪಟ್ಟಭದ್ರ ಹಿತಾಸಕ್ತಿಯೊಬ್ಬರು ಅಕ್ರಮ ಒತ್ತುವರಿ ಮಾಡಿ ಕಾಫಿತೋಟ ಮಾಡಿರುವ ಬಗ್ಗೆ ಹಲವಾರು ಬಾರಿ ತಹಶೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದರೂ ಕೆರೆ ಅಂಗಳ ವತ್ತುವರಿ ಮಾಡುವುದನ್ನು ನಿಲ್ಲಿಸಲಾಗಲಿಲ್ಲ. ಹಾಗೂ ಅವರ ಮೇಲೆ ಕ್ರಮ ತೆಗೆದುಕೊಳ್ಳದಿರುವುದು ಬಹಳ ವಿಷಾದನೀಯ ಸಂಗತಿ.

ಇದರಿಂದ ಜನರಿಗೆ, ಬಲಿಷ್ಠರು, ಪಟ್ಟಭದ್ರ ಹಿತಾಸಕ್ತಿಗಳು ಏನು ಮಾಡಿದರೂ ರಕ್ಷಣೆ ಸಿಗುತ್ತದೆ ಎನ್ನುವ ಭಾವನೆ ಬರುತ್ತದೆ. ದಯಮಾಡಿ ಈ ಭಾವನೆ ಹೋಗಲಾಡಿಸಬೇಕಾದರೆ ಎಷ್ಟೇ ದೊಡ್ಡ ವ್ಯಕ್ತಿಗಳಾದರೂ ಸರ್ಕಾರ ನಿಯಮ ಉಲ್ಲಂಘನೆ ಮಾಡಿದಾಗ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಟಿ.ಎಂ.ಮಂಜುನಾಥ್(ಲಾಟರಿ ಮತ್ತು ಸಣ್ಣ ಉಳಿತಾಯ ಸಚಿವರು):-ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ವಿಚಾರವನ್ನು ದಿನಾಂಕ26-3-92ರ ಸಂಜೆ ತಿಳಿಸಿದ್ದರಿಂದ ಉತ್ತರಗಳನ್ನು ಸಲ್ಲಿಸಲು ಆಗುವುದಿಲ್ಲ. ಆದುದರಿಂದ ಮಾನ್ಯ ಶಾಸಕಿಯವರ ಜೊತೆ ಚರ್ಚಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸಬಯಸುತ್ತೇನೆ.

5. ಹಿಂದುಳಿದ ವರ್ಗಗಳಾದ ಗಂಗಾಮತ, ಅಂಬಿಗ, ಕಬ್ಬಲಿಗ, ಮೊಗವೀರ, ಮೀನುಗಾರರಿಗೆ ಸರ್ಕಾರಿ ನೌಕರಿಗಳಲ್ಲಿ ಆದ್ಯತೆ :-

ಶ್ರೀ ಬಾಬುರಾವ್ ಚಿಂಚನಸೂರ್ (ಚಿತ್ತಾಪುರ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಹಿಂದುಳಿದ ವರ್ಗಗಳಾದ ಕುರುಬ, ಕಾಡು ಕುರುಬ, ಜೇನು ಕುರುಬ, ಕುಲಬಾಂಧವರನ್ನು ಹಾಗೂ ಬೇಡ ವಾಲ್ಮೀಕಿ ಈ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಿದ್ದು, ಕರ್ನಾಟಕ ರಾಜ್ಯದಲ್ಲಿ ಸುಮಾರು25 ಲಕ್ಷ ಕೂಲಿ, ಗಂಗಾಮತ, ಅಂಬಿಗ, ಕಬ್ಬಲಿಗ, ಮೀನುಗಾರರು, ಮೋಗವೀರರು, ಹಾಗೂ ಬೆಸ್ತರು ಇದ್ದು ಅವರು ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದಿದ್ದು ಹಾಗೂ ಸರ್ಕಾರಿ ಹುದ್ದೆಯಲ್ಲಿ ಒಂದು ಪರ್ಸೆಂಟ್ ನೌಕರಿ ಇಲ್ಲದೆ ಅತ್ಯಂತ ಹೀನಮಯ ಸ್ಥಿತಿಯಲ್ಲಿದ್ದಾರೆ. ಈ ವರ್ಗವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಸುಮಾರು ಎರಡು ವರ್ಷಗಳಿಂದಲೂ ಮನವಿಗಳನ್ನು ಸಲ್ಲಿಸುತ್ತಾ ಬಂದರೂ ಅದರ ಬಗ್ಗೆ ಸರ್ಕಾರ ಗಮನಹರಿಸದಿರುವುದರ ಬಗ್ಗೆ ಹಾಗೂ ಈ ಕಡು ಬಡವರ ಕಣ್ಣೀರಿನ ಗೋಳು ಸರ್ಕಾರಕ್ಕೆ ಗೊತ್ತಿದೆಯೆ?

ಶ್ರೀ ಬಿ.ಶಿವಣ್ಣ:(ಸಮಾಜ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಹೇಳಿಕೆ.

ಹಿಂದುಳಿದ ವರ್ಗಕ್ಕೆ ಸೇರಿದ ಗಂಗಾಮತ, ಅಂಬಿಗ, ಕಬ್ಬಲಿಗ, ಮೊಗವೀರ, ಬೆಸ್ತ ಮತ್ತು ಮೀನುಗಾರ ಇವರುಗಳು ಸರ್ಕಾರಿ ಆದೇಶ ಸಂಖ್ಯೆ ಸಕಕಾ 66ಬಿಸಿಎ 86, ದಿನಾಂಕ 13-10-1986ರ ಅನ್ವಯ 'ಬಿ' ಗುಂಪಿಗೆ ಸೇರಿದವರಾಗಿರುತ್ತಾರೆ. ಭಾರತ ಸಂವಿಧಾನದ 16 (4)ನೇ ಅನುಚ್ಛೇದದ ಮೇರೆಗೆ ಇರುವ ಶೇಕಡ 13ರ ಮೀಸಲಾತಿಯ ಅಡಿಯಲ್ಲಿ ಈ ವರ್ಗದ ಜನರೂ ಸಹ ನೇಮಕಾತಿ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಯಾವುದೇ ಜಾತಿಯನ್ನು ಸೇರಿಸುವ ಅಧಿಕಾರ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ತಮ್ಮನ್ನು ಪರಿಶಿಷ್ಟ ಜಾತಿಯೆಂದು ಪರಿಗಣಿಸುವಂತೆ ಕೋರಿ ಈ ಮೇಲೆ ತಿಳಿಸಿದ ಜಾತಿಗಳವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಇದೇ ರೀತಿ ಹಲವಾರು ಜಾತಿಗಳವರು ತಮ್ಮನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಕೋರಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದು, ಈ ಮನವಿಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸರ್ಕಾರ ಒಂದು ಸಮಿತಿಯನ್ನು ರಚಿಸಿದೆ. ಈ ಮೇಲೆ ಹೇಳಿದ ಜಾತಿಗಳವರ ಮನವಿಯನ್ನು ಸಹಾ ಈ ಸಮಿತಿಯ ಮುಂದೆ ಈಗಾಗಲೇ ಮಂಡಿಸಲಾಗಿದೆ. ಸದರಿ ಸಮಿತಿಯು ನೀಡುವ ವರದಿಯನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ಕೇಂದ್ರ ಸರ್ಕಾರಕ್ಕೆ ಸೂಕ್ತವಾಗಿ ಶಿಫಾರಸ್ಸು ಮಾಡಲಾಗುವುದು.

6. ಬೆಂಗಳೂರು ನಗರದ ಖಾಸಗಿ ಕಾಲೇಜುಗಳ ಅಧ್ಯಾಪಕರು, ಬೋಧಕರು, ಖಾಸಗಿಯಾಗಿ (ಮನೆ ಪಾಠ) ಪಾಠ ಪ್ರವಚನ ಮಾಡಕೂಡದೆಂದು ಆದೇಶ.